ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಲಯ ,

ಶ್ರೀರಂಗಪಟ್ಟಣ

DW-1

| | | |
|---|---|---|
| ಸಾಕ್ಷಿದಾರರ ಹೆಸರು | ಃ | ರಶ್ಮಿ |
| ತಂದೆ/ ಪತಿಯ ಹೆಸರು | ಃ | ದೇವಾನಂದ ಮೂರ್ತಿ |
| ವಯಸ್ಸು | ಃ | 48 ವರ್ಷ |
| ವೃತ್ತಿ | ಃ | ಗೃಹಿಣಿ |
| ವಾಸ | ಃ | ಬೆಳವಾಡಿ |

**ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ 27.03.2026**
**ಮುಖ್ಯ ವಿಚಾರಣೆ ಃ ಆರೋಪಿ ಪರ ಶ್ರೀ ಎ.ಜೆ ವಕೀಲರಿಂದ**

ನನಗೂ ಮತ್ತು ಪಿರ್ಯಾದಿಗೂ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯವಹಾರ ಆಗಿರುವುದಿಲ್ಲ. ನನ್ನಗಂಡ ಮತ್ತು ಪಿರ್ಯಾದಿ ಒಟ್ಟಿಗೆ ಒಂದೇ ಕೆಲಸ ಮಾಡುತ್ತಿದ್ದರು. ನನ್ನ ಗಂಡ ದೇವಾನಂದ ಮೂರ್ತಿ ಮೈಸೂರಿನ ವಿ.ವಿ.ಮೊಹಲ್ಲ ಗೆಸ್ಟ್ ಹೌಸ್ ನಲ್ಲಿ ಅಡುಗೆ ಕೆಲಸವನ್ನು ಮಾಡುತ್ತಿದ್ದರು. ಈ ಪ್ರಕರಣದ ಪಿರ್ಯಾದಿ ಸದರಿ ಗೆಸ್ಟ್ ಹೌಸ್ ನಲ್ಲಿ ವಾಚ್ ಮೆನ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರು.

ನನ್ನ ಗಂಡ ಮತ್ತು ಈ ಪ್ರಕರಣದ ಪಿರ್ಯಾದಿ ಚೀಟಿ ವ್ಯವಹಾರ ಮಾಡುತ್ತಿದ್ದರು. ಸದರಿ ಚೀಟಿ ವ್ಯವಹಾರಕ್ಕೆ ಸಂಬಂಧಿಸಿದಂತೆ ನನ್ನ ಗಂಡ ಈ ಪ್ರಕರಣದ ಪಿರ್ಯಾದಿಗೆ ನನ್ನ ಚೆಕ್ ಅನ್ನು ಭದ್ರತೆಗಾಗಿ ನೀಡಿರುತ್ತಾರೆ. ಸದರಿ ಚೀಟಿಗೆ ಸಂಬಂಧಿಸಿದಂತೆ ನನ್ನ ಗಂಡ ಸಂಪೂರ್ಣ ಹಣವನ್ನು ಪಿರ್ಯಾದಿಗೆ ಪಾವತಿ ಮಾಡಿದರೂ ಸಹಾ ಸದರಿ ಭದ್ರತೆಗಾಗಿ ನೀಡಿದ ನನ್ನ ಚೆಕ್ ಅನ್ನು ಪಿರ್ಯಾದಿ ನನಗೆ ವಾಪಾಸ್ಸು ನೀಡಿರುವುದಿಲ್ಲ. ನಾನು ಸದರಿ ಚೆಕ್ಕಿನ ಬಗ್ಗೆ ಪಿರ್ಯಾದಿಯನ್ನು ವಿಚಾರಿಸಿದಾಗ ಪಿರ್ಯಾದಿ ಸದರಿ ಚೆಕ್ misplace ಆಗಿರುತ್ತದೆ ಒಂದು ತಿಂಗಳ ನಂತರ ವಾಪಾಸ್ಸು ನೀಡುತ್ತೇನೆ

ಎಂದು ನನಗೆ ತಿಳಿಸಿರುತ್ತಾರೆ. ನಾನು ಪಿರ್ಯಾದಿಯನ್ನು ಸದರಿ ಚೆಕ್ ಅನ್ನು ವಾಪಾಸ್ಸು ನೀಡುವಂತೆ ಕೇಳಿದ 2 ತಿಂಗಳ ನಂತರ ಈ ನ್ಯಾಯಾಲಯದಿಂದ ಈ ಪ್ರಕರಣದಲ್ಲಿ ನನಗೆ ಸಮನ್ಸ್ ಬಂದಿರುತ್ತದೆ.

ಈ ಪ್ರಕರಣವನ್ನು ವಜಾ ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ.

ಪಾರ್ಟೀ ಸಾವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.